ಬೆಂಗಳೂರಿನ ಕೇಂದ್ರ ಕಾರಾಗೃಹದ ಸ್ಥಳಾಂತರ.

1661(2383)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೇಂದ್ರ ಕಾರಾಗೃಹವನ್ನು ಪರಪ್ಪನ ಅಗ್ರಹಾರದಲ್ಲಿ ನಿರ್ಮಿಸಿರುವ ಹೊಸ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಕಾರಣಗಳೇನು?

ಇ) ಎಂದಿನಿಂದ ಕೇಂದ್ರ ಬಂದೀಖಾನೆಯನ್ನು ಸಂಪೂರ್ಣವಾಗಿ ಹೊಸ ಜಾಗಕ್ಕೆ ಸ್ಥಳಾಂತರಿಸಲಾಗುವುದು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಬೆಂಗಳೂರಿನ ಕೇಂದ್ರ ಕಾರಾಗೃಹವನ್ನು ನೂತನವಾಗಿ ನಿರ್ಮಿಸಿರುವ ಪರಪ್ಪನ ಅಗ್ರಹಾರಕ್ಕೆ ಭಾಗಶಃ ಸ್ಥಳಾಂತರಿಸಲಾಗಿದೆ. ಅಡುಗೆ ಮನೆ ಕಟ್ಟಡ, ಆಡಳಿತ ಕಛೇರಿಯ ನೆಲಮಹಡಿ ಮತ್ತು 9ನೇ ಸಂಖ್ಯೆಯ ಬ್ಯಾರಕ್ಕನ್ನು ಇಲಾಖಾ ವಶಕ್ಕೆ ಪಡೆದುಕೊಂಡು 168 ಜನ ಶಿಕ್ಷಾ ಬಂದಿಗಳನ್ನು ಮೊದಲ ಹಂತವಾಗಿ ಸ್ಥಳಾಂತರಿಸಲಾಗಿದೆ.

ಆ) ಜೈಲಿನ ಸುತ್ತಲೂ ಕಾಂಪೌಂಡ್ ಗೋಡೆಯ ಮೇಲೆ ವಿದ್ಯುತ್ ವೈರ್‌ಫೆನ್ಸ್ ಅಳವಡಿಸುವುದು, ಭದ್ರತಾ ಕಾಂಪೌಂಡ್ ಗೋಡೆಗಳ ನಿರ್ಮಾಣ ಹಾಗೂ ಸಂದರ್ಶನ ಕೊಠಡಿಗೆ ಹೋಗಲು ಒಳಭಾಗದಿಂದ ಬಾಗಿಲು ಅಳವಡಿಸುವ ಕಾಮಗಾರಿಗಳು ಪ್ರಗತಿಯಲ್ಲಿದ್ದು ನಂತರ ಪೂರ್ತಿಯಾಗಿ ಸ್ಥಳಾಂತರಿಸಲಾಗುವುದು.

ಇ) 2001-02ನೇ ಸಾಲಿನ ಆರ್ಥಿಕ ವರ್ಷದಲ್ಲಿ

ಬೆಂಗಳೂರು ರೇಸ್ ಕೋರ್ಸ್ ಸ್ಥಳಾಂತರಿಸುವುದು.

1662(2384)

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಮುಖ್ಯ ಮಂತ್ರಿಗಳು ಈ